ಯಿಂದಾಗಿ ನನ್ನ ಕಾಲುಗಳು ಮರಗಟ್ಟಿಹೋಗಿವೆ. ಅವುಗಳನ್ನು ಅತ್ತಿತ್ತ ಇಡಲಾರೆ. ದಯವಿಟ್ಟು, ನೀನೇ ಬೇರೆ ಕಡೆ ಇಡು."

ನಾಮದೇವರು ಶಿವಲಿಂಗದ ಮೇಲಿನಿಂದ ಕಾಲುಗಳನ್ನೆತ್ತಿ ಇನ್ನೊಂದು ಕಡೆ ಇಡತೊಡಗಿದಾಗ ಅಲ್ಲೊಂದು ಶಿವಲಿಂಗವು ಉದ್ಭವವಾಯಿತು! ಅವರಿಗೆ ಅನುಮಾನ ಬಂದು, ಈ ವೃದ್ಧ ಪ್ರೇತಸಿದ್ಧಿಯುಳ್ಳವನೇನೋ ಎಂದು ಭಾವಿಸಿದರು. ಆದರೂ, ಅವರು ಧೃತಿಗೆಡದೆ, ಜಾಗರೂಕರಾಗಿ ಅಲ್ಲಿನ ಪ್ರದೇಶವನ್ನೆಲ್ಲಾ ಪರೀಕ್ಷಿಸಿ, ವೃದ್ಧರ ಕಾಲುಗಳನ್ನು ಒಂದಲ್ಲ, ಹಲವಾರು ಬಾರಿ ಬೇರೆ ಕಡೆ ಇಡಲು ಹೋದಾಗ, ಅಲ್ಲೆಲ್ಲಾ ಒಂದೊಂದು ಶಿವ ಲಿಂಗಗಳು ಉದ್ಭವವಾಗಹತ್ತಿದವು! ದಿಗ್ಭ್ರಾಂತರಾದ ಅವರು ವೃದ್ಧರ ಮುಖದ ಕಡೆ ನೋಡಿದಾಗ, ಅದರಲ್ಲಿ ಕಂಡುಬಂದ ಪ್ರಶಾಂತತೆ ಅವರನ್ನು ಮೂಕರನ್ನಾಗಿಸಿತು. ಇಲ್ಲೊಬ್ಬ ಮಾನವನ ಮನಸ್ಸಿಗೆ ಅತೀತವಾದ ಭಕ್ತಿಯುಳ್ಳ ವ್ಯಕ್ತಿಯಿರುವನೆಂದು ಮಿಂಚಿನಂತೆ ನಾಮದೇವರಿಗೆ ಹೊಳೆಯಿತು. ಈ ವೃದ್ಧ—ತನ್ನ ದೇವಾಪರಾಧದಿಂದಲೇ—ಭಗವಂತನನ್ನು ತನ್ನ ಕಾಲಡಿಯಲ್ಲಿರಿಸಿ ಕೊಂಡಿದ್ದಾನೆ! ತಮಗೂ ಮತ್ತು ವಿಸೋಬಾರಿಗೂ ಅದೆಷ್ಟು ಅಗಾಧವಾದ ವ್ಯತ್ಯಾಸವಿದೆ! ನಾಮದೇವರಿಗೆ ಹೊಳೆಯಿತು: ಭಗ ವಂತ ತಮ್ಮಿಂದ ಬಯಸಿದ್ದೇನೆಂದು. ಗುರುವಿಗೆ ಶರಣಾಗಿ ಬೇಡಿ ದರು: "ಓ ಆತ್ಮಗತ ಪ್ರಾಣರೆ! ದಯವಿಟ್ಟು ನನ್ನ ಅಜ್ಞಾನವನ್ನು ಕಳೆದು ಜ್ಞಾನದ ಬೆಳಕು ನೀಡಿರಿ." ನಂತರ ವಿಸೋಬಾರಿಂದ ಶಿಕ್ಷಣ ಪಡೆದ ಅವರು ತಮ್ಮ ಹಳೆಯ ಭಾವನೆಗಳೆಲ್ಲವನ್ನೂ ತೊರೆದು ಹೊಸತನವನ್ನು ಪಡೆದರು.

ಮಲ್ಲಿಕಾರ್ಜುನ ದೇವಸ್ಥಾನದಿಂದ ಹಿಂತಿರುಗಿಬಂದ ನಂತರ ಅವರು, ಒಂದು ದಿನ ಬೆಳಗ್ಗೆ ಪೂಜಾನಿರತರಾಗಿದ್ದಾಗ, ಹುಚ್ಚು ನಾಯಿಯೊಂದು ಕರ್ಕಶವಾಗಿ ಬೊಗಳುತ್ತಾ ಮನೆಯೊಳಗೆ ನುಗ್ಗಿತು. ಅದು ಬಹಳ ಹಸಿದಿರುವುದನ್ನು ಕಂಡ ಅವರು, ಅದಕ್ಕೆ ಒಂದಲ್ಲ ಎರಡು ಬಾರಿ ತಿಂಡಿ ನೀಡಿ ಆದರದಿಂದ ಮೈತಡವಿ ದರು. ಏನಚ್ಚರಿ! ನಾಯಿಯ ರೂಪ ಕ್ರಮೇಣ ಮರೆಯಾಗುತ್ತಾ ಬಂದು, ಅದರ ಸ್ಥಾನದಲ್ಲಿ ಭಗವಂತ ಸ್ವಯಂ ಪಾಂಡುರಂಗ ವಿಠಲನೆ ಸಕಲ ವೈಭವಗಳೊಡನೆ ಕಾಣಿಸಿಕೊಂಡನು. ಸಂತೋಷಾ ತಿರೇಕದಿಂದ ನಾಮದೇವರು ಕೂಗಿದರು: "ಪಾಂಡುರಂಗ, ನನ್ನ ಹೃದಯದ ಆನಂದದ ಖನಿಯೆ! ಈವರೆಗೂ ನೀನು ನನ್ನ ಹೃದಯದ ಅಂತರಾಳದಲ್ಲಿಯೇ ನೆಲೆಸಿದ್ದರೂ ನಾನು ನಿನ್ನನ್ನು ದೇವಸ್ಥಾನ ಆಕಾಶಗಳಲ್ಲಿ ಅರಸುತ್ತಿದ್ದೆ. ನೀನು ಸರ್ವವ್ಯಾಪಿ, ದೇವಾ!" ಪರಮಸಂತೋಷದಿಂದ ಭಗವಂತ ನಾಮದೇವರ ಶಿರಸ್ಸಿನ ಮೇಲೆ ಕೈಯಿಟ್ಟು ಹೇಳಿದ : "ಇದು ನಿಜಕ್ಕೂ ಅದ್ಭುತ, ನಾಮದೇವ. ನೀನು ಪಡೆದಿರುವ ಪರಿಪೂರ್ಣತೆ ನನ್ನ ಊಹೆ ಯನ್ನೂ ಮೀರಿದೆ." ಅವರ ಜನನಕಾಲದಲ್ಲಿಯೇ ಜ್ಯೋತಿಷಿ ನುಡಿದಂತೆ ಅಸಂಖ್ಯ ಅಭಂಗ(ಮರಾಠಿ ಹಾಡು)ಗಳನ್ನು ರಚಿಸಿ, ಸಾರ್ಥಕ ಜೀವನ ನಡೆಸಿದ ನಾಮದೇವರು ಕ್ರಿ.ಶ. ೧೩೫೦ರಲ್ಲಿ ದೇಹತ್ಯಾಗ ಮಾಡಿದರು. ◆

(ಆಧಾರ : ಆಂಗ್ಲ ಪತ್ರಿಕೆ ಪ್ರಬುದ್ಧ ಭಾರತ ಜೂನ್ ೨೦೦೦)

# ಪ್ರಹಸನ ಪ್ರಸಂಗ

ನಮ್ಮ ಅಹಂಕಾರದಿಂದ ನಾವು ಏನೋ ಮಹದುಪಕಾರ ಮಾಡುತ್ತಿರುವೆವು ಎಂದು ಭಾವಿಸುತ್ತೇವೆ. ಆದರೆ ಅದರ ನಿಜವಾದ ಪರಿಣಾಮವೇನೆಂಬುದು ನಮಗೆ ತಿಳಿದಿರುವುದೇ ಇಲ್ಲ. ನಮ್ರತೆ ಯಿಂದ ನಮ್ಮ ಕರ್ತವ್ಯವನ್ನು ಮಾಡುವುದೊಂದೇ ನಮ್ಮ ಪಾಲಿನದು. ಅದರ ಫಲಾಫಲಗಳೆಲ್ಲ ವಿಶ್ವನಿಯಮವನ್ನು ಅವಲಂಬಿಸಿರುತ್ತದೆ.

ಕ್ರೈಸ್ತ ಬೋಧಕನೊಬ್ಬನಿದ್ದ. ಅವನು ಧಾರ್ಮಿಕ ವಿಷಯವಾಗಿ ಜನರಿಗೆ ಬೋಧನೆ ಮಾಡುತ್ತಿದ್ದ. ಧರ್ಮಪ್ರಚಾರವೇ ಅವನ ಪ್ರಧಾನ ಕಾರ್ಯವಾಗಿತ್ತು.

ಅದೇ ಊರಿನಲ್ಲಿ ಬಸ್ ಚಾಲಕನೊಬ್ಬನಿದ್ದ. ಅವನು ಬಹಳ ಅಜಾಗರೂಕತೆಯಿಂದ ಬಸ್ಸನ್ನು ಓಡಿಸುತ್ತಿದ್ದ. ಪ್ರಯಾಣಿಕ ರೆಲ್ಲರೂ ತಮ್ಮ ಪ್ರಾಣವನ್ನು ಕೈಯಲ್ಲಿಯೇ ಹಿಡಿದುಕೊಂಡಿರುತ್ತಿ ದ್ದರು. ತಾವು ಊರಿಗೆ ತಲುಪುತ್ತೇವೆಯೋ ಇಲ್ಲವೊ ಎಂಬ ಭಯದಿಂದಲೇ ಕುಳಿತಿರುತ್ತಿದ್ದರು.

ಕ್ರೈಸ್ತ ಬೋಧಕ ಮತ್ತು ವಾಹನ ಚಾಲಕನಿಗೂ ಏಕಕಾಲ ದಲ್ಲಿಯೇ ಮೃತ್ಯು ಸಂಭವಿಸಿತು. ಕ್ರೈಸ್ತಬೋಧಕನು ನರಕಕ್ಕೂ ವಾಹನ ಚಾಲಕನು ಸ್ವರ್ಗಕ್ಕೂ ಹೋಗಬೇಕಾಯಿತು.

ಬೋಧಕನು ಕೋಪದಿಂದ ಅಬ್ಬರಿಸಿದ : "ಇದೇನಿದು ಅನ್ಯಾಯ? ನಾನು ಜೀವನವಿಡೀ ಧರ್ಮಬೋಧನೆ ಮಾಡಿ ಜನರನ್ನು ನರಕದ ಅಪಾಯದಿಂದ ತಪ್ಪಿಸಲು ಪ್ರಯತ್ನಿಸಿದ್ದೇನೆ. ಆದರೂ ನನಗೆ ನರಕ! ಈ ಚಾಲಕನಾದರೊ ಅಷ್ಟೊಂದು ಅಸಡ್ಡೆಯಿಂದ, ಅಜಾಗರೂಕತೆಯಿಂದ ಬಸ್ಸನ್ನು ಓಡಿಸಿ ಎಲ್ಲರನ್ನೂ ಅಪಾಯದ ಸ್ಥಿತಿಗೆ ಒಳಪಡಿಸುತ್ತಿದ್ದರೂ ಅವನಿಗೆ ಸ್ವರ್ಗ!"

ದೇವರು ಹೇಳಿದ: "ನೋಡು, ನೀನು ಧರ್ಮ ಬೋಧಿಸುತ್ತಿರು ವಾಗ ಜನರು ನಿದ್ರೆ ಮಾಡುತ್ತಿದ್ದರು. ಆದರೆ ಅವನು ಬಸ್ ಓಡಿಸುತ್ತಿರುವಾಗ ಜನರು ನನ್ನನ್ನು ನೆನೆಯುತ್ತ ಪ್ರಾರ್ಥಿಸುತ್ತಿ ದ್ದರು. ಆದ್ದರಿಂದ ಅವನೇ ಹೆಚ್ಚು ಜನೋಪಕಾರ ಮಾಡಿದ್ದಾನೆ."

❀❀❀

ಉಪಾಧ್ಯಾಯ : ಜನರು ಆಸಕ್ತಿಯಿಂದ ಕೇಳುತ್ತಿರದಿದ್ದರೂ ಎಡೆಬಿಡದೆ ಮಾತನಾಡುವವನನ್ನು ಏನೆಂದು ಕರೆಯುತ್ತೀರಿ?

ವಿದ್ಯಾರ್ಥಿ: ಉಪಾಧ್ಯಾಯ

❀❀❀

"ಕೆಲವರು ಮಾತನಾಡುವುದಕ್ಕೆ ಮುಂಚೆ ತುಂಬ bright (ಬುದ್ಧಿವಂತರಾಗಿ)ಆಗಿ ಕಾಣುವುದು ಬೆಳಕು ಶಬ್ದಕ್ಕಿಂತ ವೇಗವಾಗಿ ಚಲಿಸುವುದರಿಂದಲೇ?" ❀